ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಈ ಕೇಸನ್ನು ಹಾಕುವ ಮುಂಚೆ ನಾನು ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ನನ್ನ ತಮ್ಮ ಸಂಬಂಧಪಟ್ಟಂತಹ ಇಲಾಖೆಯಿಂದ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ, ನಾನು ನನ್ನ ಯಜಮಾನರು ಸೇರಿ ಪಡೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ವಂಶವೃಕ್ಷವನ್ನು ನನ್ನ ಅಣ್ಣ ಆತನ ಹೆಸರಿನಲ್ಲಿ ಪಡೆದುಕೊಂಡು ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಎಲ್ಲಾ ದಾಖಲಾತಿಗಳನ್ನು ನನಗೆ ಕೊಟ್ಟು ಈ ಕೇಸನ್ನು ಹಾಕಿಸಿ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಈ ಕೇಸನ್ನು ಹಾಕಿಸಿದಾದರೆ ಎಂದರೆ ಸರಿಯಲ್ಲ. ಒಪ್ಪಿ ಗೆ ಪತ್ರವನ್ನು ನಾನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-11 ಅನ್ನು 3ನೇ ಪ್ರತಿವಾದಿ ತಂದು ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

2011 ರಲ್ಲಿ 1ನೇ ಪ್ರತಿವಾದಿಯು ದಾವಾಆಸ್ತಿಯಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ, ನಮಗೆ ಸೇರಿದ 13 ಗುಂಟೆ ಜಮೀನು ಪಕ್ಕದಲ್ಲಿಯೇ ಅವರ ಆಸ್ತಿ ಅದರಲ್ಲಿ ಅವರು ಕಟ್ಟಿಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿದಾಗ ಅದರಲ್ಲಿರುವ ಮನೆ 1ನೇ ಪ್ರತಿವಾದಿಯ ಮನೆ ಎಂದು ನುಡಿಯುತ್ತಾರೆ, ಸದರಿ ಪೋಟೋವನ್ನು **ನಿಡಿ-*1* ಎಂದು ಗುರುತಿಸಲಾಯಿತು**. ಸದರಿ ಮನೆಯನ್ನು ದಿನಾಂಕ 15.05.2011 ರಲ್ಲಿ ಕಟ್ಟುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರು ಕಟ್ಟಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ಪ್ರತಿವಾದಿ ಕಟ್ಟಿರುವ

ಮನೆಯು ದಾವಾಶೆಡ್ಯೂಲ್ ಸ್ವತ್ತಿನಲ್ಲೆ ಇದೆ ಎಂದರೆ ಸರಿಯಲ್ಲ ಅವರದೇ ಪ್ರತ್ಯೇಕವಾದ ಜಾಗ ಇದೆ ಅದರಲ್ಲಿ ಕಟ್ಟಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 13 ಗುಂಟೆ ಜಮೀನಿನ ಪಕ್ಕದಲ್ಲಿ 1ನೇ ಪ್ರತಿವಾದಿಗೆ ಸೇರಿದ ಯಾವುದೇ ಜಾಗ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಮ್ಮ ಅಣ್ಣ ತಮ್ಮಂದಿರು ಚಂದ್ರಯ್ಯನವರಿಗೆ ನ್ಯಾಯಾಲಯದಲ್ಲೆ ಬರೆದುಕೊಟ್ಟಿದ್ದಾರೆ ಆದ್ದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ಮೊದಲು ನನಗೆ ಬರೆದುಕೊಟ್ಟು ನಂತರದಲ್ಲಿ ನ್ಯಾಯಾಲಯದಲ್ಲಿ ಒ ಎಸ್ ನಂ. 255/2019 ರಂತೆ ಕೇಸು ಹಾಕಿಕೊಂಡು ರಾಜಿ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.